**ಸಾಕ್ಷಿಯನ್ನು ದಿನಾಂಕಃ16-11-2021 ರಂದು ಪುನಃ ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರ ಪರ ವಕೀಲರಿಂದ**

ಪ್ರತಿವಾದಿಯವರಿಗೆ 1 ರವರಿಗೆ ಎಷ್ಟು ಜಮೀನು ಇದೆ ಎಂಬುವುದರ ಬಗ್ಗೆ ಮಾಹಿತಿ ಇದೆ. ಪ್ರತಿವಾದಿ 1 ರವರನ್ನು ನೋಡಿರುತ್ತೇನೆ. ಪ್ರತಿವಾದಿ 1 ರವರಿಗೆ ಸರ್ವೆ ನಂ. 144/1, 130/1, 6/2, 8/2, 8/3 ಮತ್ತು 9/4 ಜಮೀನು ಇರುತ್ತದೆ. ತಮ್ಮಣ್ಣರವರಿಗೆ 3 ಜನ ಮಕ್ಕಳು. ಸರ್ವೆ ನಂ. 144/1, ಹೊರತು ಪಡಿಸಿ ಸರ್ವೆ ನಂ. 130/1, 6/2, 8/2, 8/3 ಮತ್ತು 9/4 ರಲ್ಲಿ ಜಮೀನು ಮೊದಲು ಮೂಲತಃ ನಮ್ಮ ತಂದೆವರ ಹೆಸರಿನಲ್ಲಿ ಇತ್ತು ನಂತರ ನಮಗೆ ಬಂದಿರುತ್ತದೆ. ನಮ್ಮ ತಂದೆಯವರಿಗೆ ಸದರಿ ಜಮೀನು ಅವರ ತಂದೆಯಿಂದ ಬಂದಿರುತ್ತದೆ. ನಮ್ಮ ತಂದೆಯರಿಗೆ ಚಿನ್ನವ್ವರವರು ಸದರಿ ಜಮೀನನ್ನು ಉಪಯೋಗಿಸಲು ಕೊಟ್ಟಿದ್ದರು. ಸರ್ವೆ ನಂ. 144/1 ಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಸಬ ರೆಜಿಸ್ಟರ ಆಫೀಸನಲ್ಲಿ ಪರಿಶೀಲಿಸಿಕೊಂಡು ಬಂದಿಲ್ಲ. ಸರ್ವೆ ನಂ.130/1, 6/2, 8/2, 8/3 ಮತ್ತು 9/3 ಜಮೀನು ನಮ್ಮ ತಂದೆಯವರ ಹೆಸರಿಗೆ ಯಾವ ಆಧಾರದ ಮೇಲೆ ರೇವೇನ್ಯೂ ದಾಖಲೆಗಳಲ್ಲಿ ದಾಖಲಾಗಿದವು ಎಂದಬುವುದನ್ನು ಪರಿಶೀಲಿಸಿರುವುದಿಲ್ಲ. ದಿಃ04-06-1976 ರಂದು ನನ್ನ ತಂದೆ ಮುತ್ತ ಅವರ ಅಣ್ಣ-ತಮ್ಮಂದಿರ ನಡುವೆ ವಾಟ್ನಿ ಪತ್ರ ಆಗಿದ್ದು ಅದನ್ನು ನಾನು ನೋಡಿಲ್ಲ. ಸದರಿ ವಾಟ್ನಿ ಪತ್ರದ ಮೇಲೆ ಸರ್ವೆ ನಂ.130/1, 6/2, 8/2, 8/3 ಮತ್ತು 9/3 ರಲ್ಲಿ ಜಮೀನುಗಳನ್ನು ನನ್ನ ತಂದೆಯರಿಗೆ ಕೊಟ್ಟಿದ್ದರು ಎಂದರೆ ಸಾಕ್ಷಿಯು ಸರಿಯಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಅದರೇ ಸದರಿ ವಾಟ್ನಿ ಪತ್ರದಲ್ಲಿ ಸರ್ವೆ ನಂ.144/1 ರಲ್ಲಿ ಇದ್ದರಂತಹ ಜಮೀನನ್ನು ಹಣಮಂತರವರಿಗೆ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಹಣಮಂತ ತೀರಿಕೊಂಡ ನಂತರ ಆ ಜಮಿನುಗಳು ಚಿನ್ನವ್ವರವರ ಹೆಸರಿಗೆ ಬಂದವು ಎಂದರೆ ಗೊತ್ತಿಲ್ಲ.ಎಮ ಎ ನಂ.13/87 ರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ಚಿನ್ನರವ್ವರಿಗೆ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ಸಾಕ್ಷಿ ನಿಪಿ-1 ನ್ನು ತೋರಿಸಿ ಯಾರ ಹೆಸರಿನಲ್ಲಿ ಇದೆ ಎಂದು ಪ್ರಶ್ನೆ ಮಾಡಿದ್ದು ಸಾಕ್ಷಿ ಪ್ರತಿವಾದಿ 1 ರವರ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಸ್ವತ್ತು ಪ್ರತಿವಾದಿ 1 ರ ಹೆಸರಿನಲ್ಲಿ ಹೇಗೆ ದಾಖಲು ಆಯಿತು ನನಗೆ ಗೊತ್ತಿಲ್ಲ. ಪ್ರತಿವಾದಿ 1 ರವರ ಹೆಸರು ಉತ್ತಾರನಲ್ಲಿ 1990 ರಲ್ಲಿ ದಾಖಲು ಆಗಿರುತ್ತದೆ. ಪ್ರತಿವಾದಿ 1 ರವರ ನಿಪಿ-1 ರಲ್ಲಿ 1982 ರಲ್ಲಿ ಎಮ ಎ ನಂ.14/2 ರಂತೆ ದಾಖಲು ಆಗಿರುತ್ತದೆ ಎಂದರೆ ಸುಳ್ಳು. ಚಿನ್ನವ್ವರವರು ಬಾಳಪ್ಪರವರ ಹೆಸರಿಗೆ ಯಾವುದೇ ಖರೀದಿ ಪತ್ರವನ್ನು ಬರೆದು ಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ಚಿನ್ನವ್ವರರವರಿಂದ ಮೋಸ ಮಾಡಿ ಪ್ರತಿವಾದಿ 1 ಖೊಟ್ಟಿ ದಾಖಲೆಗಳನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಚಿನ್ನವ್ವರವರು 2008 ರಲ್ಲಿ ತೀರಿಕೊಂಡಿರುತ್ತಾರೆ. ಸದರಿ ಕ್ರಯ ಪತ್ರ ಖೊಟ್ಟಿ ದಾಖಲೆ ಆಗಿದ್ದು ಪ್ರತಿವಾದಿ 1 ರವರಿಂದ ಯಾವುದೇ ಕಾನೂನು ಕ್ರಮ

ಜರುಗಿಸಿಲ್ಲ. ಬಾಳಪ್ಪರವರು ಚಿನ್ನವ್ವರವರಿಂದ ಮೋಸ ಮಾಡಿ ಖರೀದಿ ಪತ್ರ ಮಾಡಿಸಿಕೊಂಡಿರುತ್ತಾರೆ ನಮ್ಮ ವಕೀಲರಿಗೆ ನಾನು ಮಾಹಿತಿ ಕೊಟ್ಟಿರುವುದಿಲ್ಲ. ನಮ್ಮ ತಂದೆಯವರು ಚಿನ್ನವ್ವರವರ ವಿರುದ್ದ ಓ ಎಸ ನಂ.144/82 ರಂತೆ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ತಂದೆಯವರು ಅವರ ಮತ್ತು ಹಣಮಂತರವರ ನಡುವೆ ವಾಟ್ನಿ ಆಗಿದೆ ಎಂದು ವಾದಿಸಿದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೆ ನಂ. 144/1 ರ ಸಂಪೂರ್ಣ ಸ್ವತ್ತಿಗೆ ಚಿನ್ನಮ್ಮರವರು ಮಾಲೀಕರು ಇದ್ದು 1982 ರಲ್ಲಿ ಪ್ರತಿವಾದಿ 1 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಚಿನ್ನಮ್ಮರವರು ಪಬ್ರ್ರತಿವಾದಿ 1 ರವರಿಗೆ ಲೀಸ್‌ಗೆ ಕೊಟ್ಟಿದ್ದರು. ಲೀಸ್ ಡೀಡ ಆಗಿರಲಿಲ್ಲ. ತಿಂಗಳು ತಿಂಗಳು ಎಷ್ಟು ಬಾಡಿಗೆ ಕೊಡುತ್ತಿದ್ದರು ಗೊತ್ತಿಲ್ಲ. ಸದರಿ ವಿಚಾರವನ್ನು ನನಗೆ ಚಿನ್ನಮ್ಮ ಹೇಳಿರುತ್ತಾರೆ. ಲೀಸ ಸಮಯದಲ್ಲಿ ಯಾರು ಯಾರು ಹಿರಿಯರು ಇದ್ದರು ಗೊತ್ತಿಲ್ಲ. ಚಿನ್ನಮ್ಮರವರು ಪ್ರತಿವಾದಿ 1 ರವರಿಗೆ ದಾವಾ ಆಸ್ತಿಯನ್ನು ಲೀಸ್‌ಗೆ ಕೊಟ್ಟಿದ್ದರು ಎಂದರೆ ಸರಿ. ಪ್ರತಿವಾದಿ 1 ರವರು ದಾವಾ ಆಸ್ತಿಯ ಕಬ್ಜೆಯಲ್ಲಿ 1982 ರಲ್ಲಿ ಇಸವಿಯಿಂದ ಇರುತ್ತಾರೆ ಎಂದರೆ ಸರಿ. ನನಗೆ ಹೆಸರಿನಲಿಲರುವ ಜಮೀನನ್ನು ಈ ದಾವೆಯಲ್ಲಿ ಹಾಕಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗೂ ನಮಗೂ ಯಾವುದೇ ಅಂಬಂಧ ಇಲ್ಲದಿದ್ದರು ಪ್ರತಿವಾದಿ ಗೆ ತೊಂದರೆ ಕೊಡುವ ಉದ್ದೇಶದಿದಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮುಧೋಳ